CC No.719-19

ಚಾಸಾಃ 1 ಪ್ರಾಸಾಃ 1

ದಿನಾಂಕಃ 23.02.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 1 ಮತ್ತು 5 ನೇ ಆರೋಪಿತರ ಪರವಾಗಿ Sri. MMH, ವಕೀಲರಿಂದ

1. ನಾನು ಶಾಲೆಗೆ ಹೋಗಿರುತ್ತೇನೆ, ಎಷ್ಟನೆ ತರಗತಿ ವರೆಗೆ ಹೋಗಿದ್ದೇನೆ ನನಗೆ ನೆನಪಿಲ್ಲ. ನಾನು ಯಾವುದೇ ದೂರು ದಾಖಲಿಸಿರುವುದಿಲ್ಲ. ನಿಪಿ.8 ರಿಂದ 10 ರಲ್ಲಿ ನನ್ನ ತಂದೆಯ ಹೆಸರು ಹೊಡ್ಡಲಾಡಸಾಬ ಹಾಲಗಿ ಎಂದು ನಮೂದಿಸಲಾಗಿದೆ ಎಂದರೆ ಸರಿ. ನನ್ನ ತಂದೆಯ ಹೆಸರು ದೊಡ್ಡಲಾಡಸಾಬ ಉರ್ಫ ದೊಡ್ಡರಾಜೇಸಾಬ ಹಾಲಗಿ ಎಂದು ತೋರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

2. ಸರ್ವೇ ನಂ.407/2ಎ2 ರ ಆಸ್ತಿಯನ್ನು ಚಾಸಾ-5 ಮತ್ತು 6 ರವರಿಗೆ ಬಾಡಿಗೆಗೆ ನೀಡಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. 1 ರಿಂದ 6 ನೇ ಆರೋಪಿತರು ಸದರಿ ಆಸ್ತಿಗೆ ವರದಿ ನೀಡಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡ ವಿಚಾರ ನನಗೆ ಗೊತ್ತಿರುವುದಿಲ್ಲ. ಆರೋಪಿತರು ಸದರಿ ಆಸ್ತಿಗೆ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುವ ವಿಚಾರವಾಗಿ ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಸದರಿ ವರದಿಯನ್ನು ನಾನು ಪ್ರಶ್ನೆ ಮಾಡದೆ ಇರುವ ಕಾರಣ ಎಲ್ಲಿಯೂ ರದ್ದಾಗಿರುವುದಿಲ್ಲ ಎಂದರೆ ಸರಿ. ವರದಿ ತಯಾರಿಸುವ ಕಾಲಕ್ಕೆ ನಾನು ಹಾಜರು ಇರಲಿಲ್ಲ ಎಂದರೆ ಸರಿ. ವರದಿಯನ್ನು ಯಾರು ಸೃಷ್ಟಿಸಿಕೊಂಡಿರುತ್ತಾರೆ ಹಾಗು ಯಾರು ಬರೆದಿರುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ.

3. ನಿಪಿ.2 ನ್ನು ಯಾರು ಬರೆದಿರುತ್ತಾರೆ ಹಾಗು ಯಾರು ಸಹಿ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.3 ಮತ್ತು ನಿಪಿ.4 ನ್ನು ಯಾವ ವಿಚಾರಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ

ಸರಿ.

4. ನನಗೆ ಸಂಬಂಧಿಸಿದ ಹೊಲವನ್ನು 1, 2 ಮತ್ತು 4 ನೇ ಆರೋಪಿತರು ಒಬ್ಬರಿಗೊಬ್ಬರು ಮಿಲಾಪಿಯಾಗಿ ನಾನು ಸತ್ತಿರುವುದಾಗಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನಗೆ ಸಂಬಂಧಿಸಿದ ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೊಲದಲ್ಲಿ ಉಳುಮೆ ಮಾಡುವಾಗ 1, 2, 4 ಮತ್ತು 5 ನೇ ಆರೋಪಿತರು ಹೊಲದ ಬಳಿ ಬಂದು ನನಗೆ ತೊಂದರೆ ಮಾಡುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸರ್ವೇ ನಂ.407/2 ಎ/2 ಕ್ಷೇತ್ರ 3 ಎಕರೆ 36 ಗುಂಟೆ ಜಮೀನು ನನ್ನ ಮಾಲೀಕತ್ವದ್ದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಣಗೇರೆಯಲ್ಲಿ ವಾಸವಾಗಿದ್ದು, ಸದರಿ ಜಮೀನನ್ನು 1981 ರಲ್ಲಿ ಈರಪ್ಪ ಪುಟ್ಟಪ್ಪ ನೀರಲಗಿ ಇವರಿಂದ ಖರೀದಿ ಹಿಡಿದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 08.06.2016 ರಂದು ಆರೋಪಿತರು ನಾನು 1974 ರಲ್ಲಿ ಮರಣ ಹೊಂದಿದ್ದಾಗಿ ಸೃಷ್ಟಿಸಿಕೊಂಡಿರುವ ದಾಖಲೆಯನ್ನು ಕಚೇರಿಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಮರಣ ಪ್ರಮಾಣಪತ್ರವನ್ನು ಸೃಷ್ಟಿಸಿಕೊಳ್ಳಲು ಸಿ.ಮಿ.ನಂ.57/2017 ನ್ನು ಲಕ್ಷ್ಮೇಶ್ವರ ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮ ಲೆಕ್ಕಾಧಿಕಾರಿಗಳೊಂದಿಗೆ ಮಿಲಾಪಿಯಾಗಿ ಜಮೀನಿನ ಪಹಣಿ ಪತ್ರಿಕೆಯನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸದರಿ ಜಮೀನಿಗೆ ಓ.ಎಸ್.ನಂ.39/2017 ಎಂಬ ಪ್ರಕರಣ

ಚಾಲ್ತಿಯಲ್ಲಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಸಹಿಯನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ವಿಚಾರವನ್ನು ತಿಳಿದುಕೊಂಡು ದೂರು ನೀಡಲು ಹೋಗಿದ್ದು, ಪೋಲಿಸರು ದೂರು ಸ್ವೀಕರಿಸಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ವಕೀಲರ ಮುಖಾಂತರ ಖಾಸಗಿ ದೂರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೇಲಿನ ವಿಚಾರದ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಿಃ 10.02.2019 ರಂದು ಮಧ್ಯಾಹ್ನ 01.00 ಗಂಟೆಯಿಂದ 02.00 ರವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಸೂರಣಗಿ ಗ್ರಾಮ ಲೆಕ್ಕಾಧಿಕಾರಿಗಳ ಕಚೇರಿಯಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡುವ ಕಾಲಕ್ಕೆ ನನ್ನ ತಂದೆಯ ಮರಣ ಪ್ರಮಾಣಪತ್ರವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಸಂಖ್ಯೆ 407/2 ಎ/2 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- 7 ನೇ ಆರೋಪಿತರ ಪರವಾಗಿ Smt. SHM, ವಕೀಲರಿಂದ</u>

ನಾನು ದಾಖಲು ಮಾಡಿದ್ದ ಅಸಲು ದಾವೆ ಸಂಖ್ಯೆ 39/2017 ನನ್ನ ಪರವಾಗಿ ತೀರ್ಪು ಬಂದಿರುತ್ತದೆ ಎಂದರೆ ಸರಿ. ವರದಿ ನೀಡಿ ತಕರಾರು ಇದ್ದಲ್ಲಿ ಸಲ್ಲಿಸುವಂತೆ ಸಾರ್ವಜನಿಕ ನೋಟಿಸ ನೀಡಿದ್ದಕ್ಕೆ ನಾನು ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ. 7 ನೇ ಆರೋಪಿಯು ದಾಖಲೆಗಳ

ಆಧಾರದಂತೆ ನಿಯಮಾನುಸಾರ ಪಹಣಿ ಪತ್ರಿಕೆಯನ್ನು ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮರಣ ಪ್ರಮಾಣಪತ್ರ ಕೋರಿ ಸಲ್ಲಿಸಿದ್ದ ಸಿ.ಮಿ.ಸಂಖ್ಯೆ 57/2017 ರಲ್ಲಿ ಸಾರ್ವಜನಿಕ ಪ್ರಕರಣೆಯಾಗಿದ್ದು ಅದಕ್ಕೆ ನಾನು ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ.

3 ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಅನುಮತಿ ನೀಡಿ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.